# ಮಾಸ ಭವಿಷ್ಯ

**ಅರುಣ ಪಿ. ಭಟ್**



**ಮೇಷ:** ಆಕಸ್ಮಿಕ ಧನಲಾಭ. ಕಲಾವಿದರಿಗೆ ಸಾಹಿತಿಗಳಿಗೆ ಮಾನ ಸನ್ಮಾನ ಯೋಗ. ಅರ್ಧದಲ್ಲಿ ನಿಂತ ಕಟ್ಟಡ, ಮನೆ ನಿರ್ಮಾಣ ಕಾರ್ಯಗಳು ಪೂರ್ಣಗೊಳ್ಳುವವು. ಚಿಕ್ಕ ಪ್ರವಾಸ. ಆರ್ಥಿಕ ಅನುಕೂಲತೆ. ವ್ಯವಹಾರಗಳಲ್ಲಿ ಲಾಭ. ಸ್ನೇಹಿತರು, ಬಂಧುಗಳೊಂದಿಗೆ ಉತ್ತಮ ಬಾಂಧವ್ಯ. ಶುಭ: 14, 19, 29 ಅಶುಭ: 11, 16, 20.



**ವೃಷಭ:** ಉನ್ನತ ಶಿಕ್ಷಣದಲ್ಲಿ ಪ್ರಗತಿ. ಬಂಧುಗಳ ಕಿರಿಕಿರಿ, ವಿವಾದಗಳು ಬೇಸರ ಹುಟ್ಟಿಸಬಹುದು. ಅನಾವಶ್ಯಕ ಖರ್ಚುವೆಚ್ಚಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಿ. ತಿಂಗಳ ಅಂತ್ಯದಲ್ಲಿ ಆದಾಯದಲ್ಲಿ ಏರಿಕೆಯುಂಟಾಗುವುದು. ವ್ಯಾಪಾರ ವ್ಯವಹಾರದಲ್ಲಿ ಲಾಭ. ಶುಭ: 05, 11, 23 ಅಶುಭ: 07, 16, 20.



**ಮಿಥುನ:** ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು. ಸ್ವತಂತ್ರ ಉದ್ಯೋಗದಲ್ಲಿ ಉತ್ತಮ ಲಾಭ. ಮನೆಯ ಹಿರಿಯರ ಪ್ರೀತಿ ಆಶೀರ್ವಾದ ಲಭಿಸುವುದು. ಆಸ್ತಿ ಖರಿದಿ ಬಗ್ಗೆ ಚಿಂತನೆ. ಕಲಾವಿದರಿಗೆ, ಸಾಹಿತಿಗಳಿಗೆ ಉತ್ತಮ. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ಶುಭ: 10, 14, 22 ಅಶುಭ: 11, 18, 27.



**ಕರ್ಕ:** ಪಾಲುದಾರಿಕೆಯ ಉದ್ಯೋಗದಲ್ಲಿ ತೊಂದರೆ ಭಿನ್ನಾಭಿಪ್ರಾಯ ತಲೆದೊರಬಹುದು. ಆರ್ಥಿಕ ಮುಗ್ಗಟ್ಟು ಕಾಡಬಹುದು. ಸ್ವತಂತ್ರ ವೃತ್ತಿಪರರಿಗೆ ಲಾಭ. ಸರ್ಕಾರಿ ಉದ್ಯೋಗಿಗಳಿಗೆ ಅನಿರೀಕ್ಷಿತ ವರ್ಗಾವಣೆ. ವಿದ್ಯಾರ್ಥಿಗಳಿಗೆ ಶುಭ. ಸೋದರರಿಂದ ಶುಭಸುದ್ದಿ. ಶುಭ: 11, 16, 24 ಅಶುಭ: 10, 14, 23.



**ಸಿಂಹ:** ವಿದ್ಯಾರ್ಥಿಗಳಿಗೆ ಉತ್ತಮ ಪ್ರಗತಿ. ಹೆಚ್ಚು ಉತ್ಸಾಹ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ವ್ಯಾಪಾರ ವ್ಯವಹಾರ ಲಾಭದಾಯಕವಾಗಿರುತ್ತದೆ. ಉತ್ತಮ ಜೀವನ ಶೈಲಿಗೆ ಶ್ರಮವಹಿಸುವಿರಿ. ಸಂಗಾತಿಗೆ ಉತ್ತಮ ಉಡುಗೊರೆಗಳನ್ನು ನೀಡುವಿರಿ. ಶುಭ: 16, 20, 28 ಅಶುಭ: 13, 19, 26.



**ಕನ್ಯಾ:** ಯುವ ಜನರಿಗೆ ಉತ್ತಮ ಸಮಯ. ಹೊಸ ಯೋಜನೆಗಳು ಸಾಕಾರಗೊಳ್ಳುತ್ತವೆ. ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ಮಾಡಿ. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ತಿಂಗಳ ಆರ್ಥಿಕವಾಗಿ ಅನುಕೂಲತೆ ಇರುವುದು. ಬಾಕಿ ಹಣ ಕೈಸೇರುವುದು. ಶುಭ: 12, 16, 24 ಅಶುಭ: 11, 18, 20.



**ತುಲಾ:** ವ್ಯಾಪಾರ ವ್ಯವಹಾರಸ್ಥರಿಗೆ ಉತ್ತಮ ಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ. ವಿವಾಹಾಪೇಕ್ಷಿಗಳಿಗೆ ಶುಭಸಮಾಚಾರ. ಕುಟುಂಬ ಸೌಖ್ಯ. ಮನೆಗೆ ಹೊಸ ಪೀಠೋಪಕರಣ, ಅಲಂಕಾರಿಕ ವಸ್ತು ಖರೀದಿ. ಶುಭ: 12, 18, 24 ಅಶುಭ: 13, 19, 27.



**ವೃಶ್ಚಿಕ:** ಹಲವು ಸವಾಲುಗಳು ಏಕಕಾಲಕ್ಕೆ ಎದುರಾಗುತ್ತವೆ. ಎಲ್ಲಾ ಕೆಲಸವನ್ನು ಸಮರ್ಥವಾಗಿ ಮಾಡಲು ಪ್ರಯತ್ನಿಸುವಿರಿ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ತಿಂಗಳ ಮಧ್ಯಭಾಗದಲ್ಲಿ ವ್ಯಾಪಾರ ಉದ್ಯಮ ವಿಸ್ತರಣೆಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ. ಶುಭ: 10, 14, 22 ಅಶುಭ: 12, 16, 23.




**ಧನು:** ವ್ಯಾಪಾರ, ಉದ್ಯಮವನ್ನು ವಿಸ್ತರಿಸುವಿರಿ. ಬಿಡುವಿಲ್ಲದ ಉದ್ಯೋಗದ ನಡುವೆಯೂ ಕುಟುಂಬ ಜೀವನಕ್ಕೆ ಹೆಚ್ಚಿನ ಸಮಯ ನೀಡಬೇಕಾಗುತ್ತದೆ. ವೈಯಕ್ತಿಕ ವಿಚಾರಗಳಲ್ಲಿ ಸವಾಲುಗಳು ಎದುರಾಗಬಹುದು. ಆರೋಗ್ಯದ ಬಗ್ಗೆ ಎಚ್ಚರಿಕೆ ಇರಲಿ. ಶುಭ: 15, 26, 29 ಅಶುಭ: 12, 23, 27.



**ಮಕರ:** ಮನೆಗೆ ಹಳೆಯ ಮಿತ್ರರ ಆಗಮನ. ವಿವಿಧ ಮೂಲಗಳಿಂದ ಉತ್ತಮ ಲಾಭ ಪಡೆಯುವ ಅವಕಾಶವಿದೆ. ಇದರಿಂದ ಹೆಚ್ಚು ಉತ್ಸಾಹಭರಿತರಾಗಿ, ಉಲ್ಲಸಿತರಾಗಿ ಕಾಣಿಸಿಕೊಳ್ಳಲಿದ್ದೀರಿ. ವಿದ್ಯಾರ್ಥಿಗಳಿಗೆ ಯಶಸ್ಸು. ಮಕ್ಕಳ ಮದುವೆಯ ವಿಚಾರವನ್ನು ಅಂತಿಮಗೊಳಿಸುವಿರಿ. ಶುಭ: 19, 22, 28 ಅಶುಭ: 12, 16, 21.



**ಕುಂಭ:** ಪಾಲುದಾರಿಕೆ ವ್ಯವಹಾರಗಳನ್ನು ಮಾಡುತ್ತಿರುವವರಿಗೆ ಹೊಸ ಅವಕಾಶಗಳು ದೊರೆಯಲಿವೆ. ಕೆಲವು ಅನಿರೀಕ್ಷಿತ ಖರ್ಚುಗಳಿಗಾಗಿ ಹಣ ಮೀಸಲಿಡಲು ಆಲೋಚಿಸುವಿರಿ. ಆರೋಗ್ಯದಲ್ಲಿ ಏರುಪೇರುಗಳಾಗಬಹುದು. ಪಿತ್ರಾರ್ಜಿತ ಆಸ್ತಿ ವಿಚಾರದಲ್ಲಿ ಸಂಘರ್ಷ ಏರ್ಪಡಬಹುದು. ಶುಭ: 15, 18, 26 ಅಶುಭ: 14, 21, 28.



**ಮೀನ:** ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲು ಆರಂಭವಾಗುತ್ತದೆ. ಉದ್ಯಮಿಗಳು, ವ್ಯಾಪಾರ ವಿಸ್ತರಿಸುವರು. ಆರೋಗ್ಯ ಉತ್ತಮವಾಗಿರುತ್ತದೆ. ಆತ್ಮವಿಶ್ವಾಸ ಹೆಚ್ಚುತ್ತದೆ. ಹಣಕಾಸಿನ ಹರಿವು ಹೆಚ್ಚಲಿದೆ. ಸಂಬಂಧಗಳು ಸುಮಧುರವಾಗಿರುತ್ತವೆ. ಶುಭ: 16, 20, 28 ಅಶುಭ: 12, 22, 29.